2016 ಕ.ತೀ.ವ 878

## ಸನ್ಮಾನ್ಯ ನ್ಯಾಯಮೂರ್ತಿ ಶ್ರೀ ಎ.ವಿ. ಚಂದ್ರಶೇಖರ

### ಶ್ರೀಮತಿ ಶಾರದಮ್ಮ –ವಿರುದ್ಧ– ಕೃಷಿ ವಿಜ್ಞಾನಗಳ ವಿಶ್ವವಿದ್ಯಾನಿಲಯದ ಆಡಳಿತಾಧಿಕಾರಿ ಮತ್ತು ಇನ್ನೊಬ್ಬರು*

ಭಾರತ ಸಂವಿಧಾನ ಅನುಚ್ಛೇದ 226 ಹಾಗೂ 227ರಡಿಯಲ್ಲಿ ರಿಟ್ ಅರ್ಜಿ.

ಎದುರುದಾರರ ವಿರುದ್ಧ ಅಧಿವಿಚಾರಣಾ ನ್ಯಾಯಾಲಯದಲ್ಲಿ ಹೂಡಿದ್ದ ದಾವೆಯನ್ನು ರಿಟ್ ಅರ್ಜಿದಾರರು ಹಿಂತೆಗೆದುಕೊಂಡ ಪರಿಣಾಮ ಎರಡನೇ ಎದುರುದಾರರು ರಿಟ್ ಅರ್ಜಿದಾರರ ಮೃತಪಟ್ಟ ಪತಿಯ ಪತ್ನಿ ಎಂದು ಮೊದಲನೇ ಎದುರುದಾರರಿಂದ ಪಿಂಚಣಿ ಸೌಲಭ್ಯವನ್ನು ಪಡೆಯುತ್ತಾರೆ. ಈ ಕಾರಣದಿಂದ ತಾವು ಹಿಂತೆಗೆದುಕೊಂಡ ದಾವೆಯನ್ನು ಪುನಶ್ಚೇತನಗೊಳಿಸುವಂತೆ ಸಲ್ಲಿಸಿದ ಮಧ್ಯಂತರ ಅರ್ಜಿಯನ್ನು ವಜಾಗೊಳಿಸಿದ ಅಧಿವಿಚಾರಣಾ ನ್ಯಾಯಾಲಯದ ಆದೇಶ ಕ್ರಮವನ್ನು ಪ್ರಶ್ನಿಸಿ ಸದರಿ ರಿಟ್ ಅರ್ಜಿ.

ಸಿವಿಲ್ ಪ್ರಕ್ರಿಯಾ ಸಂಹಿತೆ ಕಲಂ 151ರಡಿಯಲ್ಲಿ ನ್ಯಾಯಾಲಯವು ತನ್ನ ಅಂತರ್ನಿಹಿತ ಅಧಿಕಾರವನ್ನು ಬಳಸಿ ವಜಾ ಆದೇಶವನ್ನು ಹಿಂಪಡೆಯಲು ಅರ್ಹವಾದ ಪ್ರಕರಣವೆಂದು ಅಭಿಪ್ರಾಯಪಟ್ಟ ಉಚ್ಚ ನ್ಯಾಯಾಲಯವು ಸದರಿ ರಿಟ್ ಅರ್ಜಿಯನ್ನು ಪುರಸ್ಕರಿಸಿ ದಾವೆಯನ್ನು 6 ತಿಂಗಳೊಳಗಾಗಿ ಬಗೆಹರಿಸುವಂತೆ ಅಧಿವಿಚಾರಣಾ ನ್ಯಾಯಾಲಯಕ್ಕೆ ಹಿಂದಿರುಗಿಸಿದೆ.

***ಉಲ್ಲೇಖಿಸಲಾದ ಮೊಕದ್ದಮೆಗಳು*** ***ಪ್ಯಾರಾಗಳಲ್ಲಿ***

*1. ಎಐಆರ್ 2006 ಎಸ್‌ಸಿ 1260*
*ಜೆಟ್ ಪ್ಲೈವುಡ್ ಪ್ರೈವೇಟ್ ಲಿಮಿಟೆಡ್*
*ಮತ್ತು ಇನ್ನೊಬ್ಬರು –ವಿರುದ್ಧ– ಮಧುಕರ್ ನೌಲಾಕಾ (ಉಲ್ಲೇ) 11*

*ರಿಟ್ ಅರ್ಜಿ ಸಂ. 19377/2015(ಜಿಎಂ–ಸಿಪಿಸಿ), ದಿನಾಂಕ: 9ನೇ ಜುಲೈ, 2015.

2. *ಎಐಆರ್ 1986 ಸಿಎಎಲ್ 19*
*ರಾಮೇಶ್ವರ್ ಸರ್ಕಾರ್ -ವಿರುದ್ಧ-*
*ಪಶ್ಚಿಮ ಬಂಗಾಳ ರಾಜ್ಯ ಸರ್ಕಾರ ಮತ್ತು ಇತರರು (ಉಲ್ಲೇ) 11*
3. *[2012] 2 ಕೆಎಆರ್.ಎಲ್.ಜೆ.309*
*ಗಿರಿಜಾ ವಲ್ಲಭನ್ -ವಿರುದ್ಧ-*
*ಜೆ.ಬಿ.ಜೆ. ಪ್ಲಾಂಟೇಷನ್ ಪ್ರೈ. ಲಿಮಿಟೆಡ್*
*ಮತ್ತು ಇತರರು (ಉಲ್ಲೇ) 24*
4. *ಎಐಆರ್ 1962 ಎಸ್‌ಸಿ 527*
*ಮನೋಹರ್‌ಲಾಲ್ ಚೋಪ್ರಾ -ವಿರುದ್ಧ-*
*ರಾಜ್ ಬಹದ್ದೂರ್ ರಾವ್ ರಾಜಾ ಸೇಠ್ ಹೀರಾಲಾಲ್ (ಉಲ್ಲೇ) 27*
5. *ಎಐಆರ್ 2007 ಎಸ್‌ಸಿ 2571*
*ಅರ್.ಎನ್. ಜಡಿ ಅಂಡ್ ಬ್ರದರ್ಸ್ ಮತ್ತು ಇತರರು*
*-ವಿರುದ್ಧ- ಸುಭಾಶ್‌ಚಂದ್ರ (ಉಲ್ಲೇ) 32*

ಅರ್ಜಿದಾರರ ಪರ: ಶ್ರೀ ಕ್ಲಿಫ್ಟನ್ ಡಿ ರೊಜಾರಿಯೋ, ನ್ಯಾಯವಾದಿ ಪರವಾಗಿ ಶ್ರೀಮತಿ ಮೈತ್ರೇಯಿ ಕೃಷ್ಣನ್, ನ್ಯಾಯವಾದಿ,
1ನೇ ಎದುರುದಾರರ ಪರ: ಶ್ರೀ ಆರ್. ಶ್ರೀಧರ್ ಹಿರೇಮಠ್, ನ್ಯಾಯವಾದಿ.
2ನೇ ಎದುರುದಾರರ ಪರ: ಶ್ರೀ ಎಸ್.ಆರ್. ಕೃಷ್ಣಕುಮಾರ್, ನ್ಯಾಯವಾದಿ.

## ಆಜ್ಞೆ

**ನ್ಯಾಯಮೂರ್ತಿ ಶ್ರೀ ಎ.ವಿ. ಚಂದ್ರಶೇಖರ:**

ಪ್ರಸಕ್ತ ಅರ್ಜಿಯನ್ನು ಭಾರತ ಸಂವಿಧಾನದ 227ನೇ ಅನುಚ್ಛೇದದ ಅಡಿಯಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆ 151ನೇ ಪ್ರಕರಣದ ಮೇರೆಗಿನ ಸಂಕೀರ್ಣ 510/13 ಅರ್ಜಿಯಲ್ಲಿ ಹೊರಡಿಸಿದ ದಿನಾಂಕ 12.1.2015ರ ಆದೇಶದ ವಿರುದ್ಧ ಸಲ್ಲಿಸಲಾಗಿದೆ.

2. ಇಲ್ಲಿನ ಅರ್ಜಿದಾರಳು ಹಿರಿಯೂರಿನಲ್ಲಿನ 1ನೇ ಎದುರುದಾರರ ತೋಟದಲ್ಲಿ ಕೆಲಸ ನಿರ್ವಹಿಸುತ್ತಿದ್ದ ದಿವಂಗತ ಕೃಷ್ಣಾಚಾರಿಯ ಕಾನೂನುಬದ್ಧವಾಗಿ ವಿವಾಹವಾದ

ಪತ್ನಿಯೆಂಬುದಾಗಿ ತಿಳಿಸುವ ಘೋಷಣೆಯ ಪರಿಹಾರಕ್ಕಾಗಿ ಸಲ್ಲಿಸಿದ ಓ.ಎಸ್.6870/09 ಮೂಲ ದಾವೆಯಲ್ಲಿ ಈಕೆ ವಾದಿಯಾಗಿದ್ದಳು. ಇಲ್ಲಿನ 2ನೇ ಎದುರುದಾರಳು ಕೂಡ ಸದರಿ ಕೃಷ್ಣಾಚಾರಿಯ ಪತ್ನಿಯೆಂದು ಕ್ಲೇಮು ಮಾಡಿರುತ್ತಾಳೆ. ಆಕೆಯ ಕ್ಲೇಮಿನ ಹಿನ್ನೆಲೆಯಲ್ಲಿ ವಾದಿಯು ತಾನು ಕೃಷ್ಣಾಚಾರಿಯ ಕಾನೂನುಬದ್ಧವಾಗಿ ವಿವಾಹವಾದ ಪತ್ನಿಯೆಂಬ ಮಟ್ಟಿಗೆ ಘೋಷಣೆಯನ್ನು ಸಲ್ಲಿಸುವ ಅಗತ್ಯತೆಯುಂಟಾಯಿತು.

3. ವಾದಿಯ ಪ್ರಕಾರ, ಅರ್ಜಿದಾರಳ ವಿವಾಹವು ಕೃಷ್ಣಾಚಾರಿಯೊಂದಿಗೆ ಹಿಂದೂ ಸಂಪ್ರದಾಯದಂತೆ 4.9.1972ರಂದು ವಿಧಿವತ್ತಾಗಿ ನೆರವೇರಿದ್ದು, ವಾದಿಯೊಂದಿಗೆ ಆತನು ವಿವಾಹವಾಗುವ ಮುಂಚೆಯೇ ಸೇವೆಗೆ ಸೇರ್ಪಡೆಯಾಗಿದ್ದ. ಅವರಿಬ್ಬರೂ ಕೆಲವು ಕಾಲ ಒಟ್ಟಿಗೆ ಬದುಕಿದ್ದರು. ಆ ನಂತರ ಆಕೆಯನ್ನು ಕೃಷ್ಣಾಚಾರಿ ಬಿಟ್ಟುಹೋಗಿದ್ದ ಎಂದು ಹೇಳಲಾಗಿದೆ. ಆದ್ದರಿಂದ ಆಕೆಯು ಜೀವನಾಂಶ ಕೋರಿ ಓ.ಎಸ್.3/96 ದಾವೆ ಹೂಡಿದ್ದಳು, ಅದು ಡಿಕ್ರಿಯಾಗಿ ಮಾಸಿಕ 1,000/– ರೂ.ಗಳನ್ನು ಜೀವನಾಂಶವಾಗಿ ಸಂದಾಯ ಮಾಡುವಂತೆ ಕೃಷ್ಣಾಚಾರಿಗೆ ನಿರ್ದೇಶಿಸಲಾಗಿತ್ತು. ಆನಂತರ ಆತ ಅದನ್ನು ಸಂದಾಯ ಮಾಡಲಿಲ್ಲ, ಆಕೆ ಅದನ್ನು ವಸೂಲಿ ಮಾಡಲು ಜಾರಿ ಅರ್ಜಿಯನ್ನು ಸಲ್ಲಿಸಿದಳು.

4. 17.12.2008ರಂದು ಕೃಷ್ಣಾಚಾರಿಯು ಮರಣ ಹೊಂದಿದ ಪರಿಣಾಮವಾಗಿ, ಆಕೆಯು ಘೋಷಣೆಯ ಪರಿಹಾರಕ್ಕಾಗಿ ಮತ್ತು ಕೃಷ್ಣಾಚಾರಿಯ ಸಾವಿನಿಂದ ಪ್ರಾಪ್ತವಾಗುವ ಎಲ್ಲಾ ವಿತ್ತೀಯ ಪ್ರಯೋಜನಗಳನ್ನು ತನಗೆ ಸಂದಾಯ ಮಾಡುವಂತೆ ಕಡ್ಡಾಯ ಪ್ರತಿಬಂಧಕಾಜ್ಞೆಯನ್ನು ಹೊರಡಿಸುವ ತತ್ಪರಿಣಾಮದ ಪರಿಹಾರಕ್ಕಾಗಿ ಕೃಷ್ಣಾಚಾರಿಯ ನಿಯೋಜಕ ಮತ್ತು ಶ್ರೀಮತಿ ನಾಗರತ್ನಮ್ಮಳ ವಿರುದ್ಧ ದಾವೆಯನ್ನು ದಾಖಲಿಸಲು ನಿಶ್ಚಯಿಸುತ್ತಾಳೆ.

5. ದಾವೆಯ ಇತ್ಯರ್ಥದ ಅವಧಿಯಲ್ಲಿ ಆಕೆಯು ಅದೇ ವ್ಯಾಜ್ಯ ಕಾರಣದ ಮೇಲೆ ಹೊಸದಾಗಿ ದಾವೆಯನ್ನು ದಾಖಲಿಸುವ ಸ್ವಾತಂತ್ರ್ಯವನ್ನು ನೀಡಿ ದಾವೆಯನ್ನು ವಜಾಗೊಳಿಸುವ ಕೋರಿಕೆಯುಳ್ಳ ಮೆಮೋವನ್ನು ಸಲ್ಲಿಸುತ್ತಾಳೆ. ಸದರಿ ಮೆಮೋವನ್ನು

4.6.2012ರಂದು ನ್ಯಾಯಾಲಯವು ಒಪ್ಪಿಕೊಳ್ಳುತ್ತದೆ ಮತ್ತು ದಾವೆಯು ಒತ್ತಡವಿಲ್ಲದೆ ವಜಾಗೊಳ್ಳುತ್ತದೆ ಮತ್ತು ಮೂಲ ದಸ್ತಾವೇಜುಗಳನ್ನು ಆಕೆಗೆ ಹಿಂದಿರುಗಿಸಲಾಗುತ್ತದೆ.

6. ದಾವೆಯು ವಜಾಗೊಂಡ ಆಧಾರದ ಮೇಲೆ ಸದರಿ ದಾವೆಯಲ್ಲಿ 2ನೇ ಪ್ರತಿವಾದಿಯಾಗಿದ್ದ ನಾಗರತ್ನಮ್ಮ ನಾಮನಿರ್ದೇಶಿತಳಾಗಿದ್ದು 1ನೇ ಎದುರುದಾರರನ್ನು ಸಂಪರ್ಕಿಸಿ ಎಲ್ಲಾ ಪಿಂಚಣಿಗೆ ಸಂಬಂಧಿಸಿದ ಪ್ರಯೋಜನಗಳನ್ನು ಪಡೆದುಕೊಂಡಳು. ತನ್ನ ಪರವಾಗಿ ಎಲ್ಲಾ ಪಿಂಚಣಿ ಪ್ರಯೋಜನಗಳನ್ನು ಇತ್ಯರ್ಥಗೊಳಿಸುವ ಕೋರಿಕೆಯೊಂದಿಗೆ ವಾದಿಯು ನಿಯೋಜಕರನ್ನು ಸಂಪರ್ಕಿಸಿದಾಗ, ಓ.ಎಸ್.6870/09ರ ಆಕೆಯ ದಾವೆಯು ವಜಾಗೊಂಡ ಹಿನ್ನೆಲೆಯಲ್ಲಿ ಆಕೆ ಯಾವುದೇ ಹಣಕಾಸು ಪ್ರಯೋಜನಗಳಿಗೆ ಹಕ್ಕುಳ್ಳವಳಲ್ಲವೆಂದು ತಿಳಿಸಿ ಆಕೆಗೆ ಹಿಂಬರಹ ನೀಡಲಾಯಿತು. 2ನೇ ಎದುರುದಾರ – ಪ್ರತಿವಾದಿಯು ವಾದಿಗೆ ಹಿಂಬರಹವನ್ನು ದಿನಾಂಕ 22.7.2013ರಂದು ನೀಡಿರುತ್ತಾನೆ.

7. ಹಾಗಾಗಿ ಅರ್ಜಿದಾರಳು ತಾನು ಸಲ್ಲಿಸಿದ ಮೆಮೋ ಆಧಾರದ ಮೇಲೆ ತನ್ನ ದಾವೆಯನ್ನು ವಜಾಗೊಳಿಸಿದ ಆದೇಶವನ್ನು ಹಿಂಪಡೆಯುವಂತೆ ಮತ್ತು ಸದರಿ ದಾವೆಯನ್ನು ಪುನರ್ ಸ್ಥಾಪಿಸುವಂತೆ ನ್ಯಾಯಾಲಯವನ್ನು ಕೋರಿ ಓ.ಎಸ್.6870/09ರಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆಯ 151ನೇ ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಲು ನಿಶ್ಚಯಿಸುತ್ತಾಳೆ. ಅದಕ್ಕೆ ಆಕೆಯು ನೀಡಿರುವ ಕಾರಣವೇನೆಂದರೆ, ಅಂಥ ವಜಾಗೊಳ್ಳುವಿಕೆಯ ಗಂಭೀರ ಪರಿಣಾಮಗಳ ಬಗ್ಗೆ ನಿರೀಕ್ಷಿಸದೆ ತಾನು ಅನಿವಾರ್ಯವಾಗಿ ಆ ದಾವೆಯನ್ನು ವಜಾಗೊಳಿಸಿಕೊಳ್ಳಬೇಕಾಯಿತು ಎಂಬುದಾಗಿದೆ. ಅಲ್ಲದೆ ಆಕೆಯು ದಾವೆಯನ್ನು ವಜಾಗೊಳಿಸಿಕೊಂಡರೆ ಆಕೆಯ ಪರವಾಗಿ ಪಿಂಚಣಿಯನ್ನು ಇತ್ಯರ್ಥಗೊಳಿಸಲಾಗುವುದು ಎಂಬ ಆಶ್ವಾಸನೆಗಳನ್ನು ನೀಡಲಾಗಿತ್ತು ಎಂದು ಹೇಳಲಾಗಿದೆ.

8. ಸದರಿ ಅರ್ಜಿಯನ್ನು ಸಂಕೀರ್ಣ 510/13 ಎಂದು ದಾಖಲಿಸಿಕೊಳ್ಳಲಾಯಿತು. ಸದರಿ ಅರ್ಜಿಗೆ ಆಕ್ಷೇಪಣೆಗಳನ್ನು ಸಲ್ಲಿಸಲಾಯಿತು ಮತ್ತು ವಿಚಾರಣೆ ನಡೆದು,

ಅದರಲ್ಲಿ ಅರ್ಜಿದಾರಳನ್ನು ಪಿ.ಡಬ್ಲ್ಯು–1 ಆಗಿ ವಿಚಾರಣೆಗೊಳಪಡಿಸಲಾಯಿತು ಮತ್ತು ಆಕೆಯ ಪರವಾಗಿ ಮೂರು ನಿಶಾನೆಗಳನ್ನು ಗುರುತು ಮಾಡಿಸಲಾಯಿತು. ಅಂತಿಮವಾಗಿ ಮಾನ್ಯ ನ್ಯಾಯಾಧೀಶರು ದಿನಾಂಕ 12.1.2015ರ ಪರಿಗಣಿತ ಆದೇಶದ ಅನುಸಾರ ಸದರಿ ಅರ್ಜಿಯನ್ನು ವಜಾಗೊಳಿಸಿದರು.

9. ಭಾರತ ಸಂವಿಧಾನದ 227ನೇ ಅನುಚ್ಛೇದದ ಅಡಿಯಲ್ಲಿ ದಾಖಲಿಸಲಾದ ಈ ಅರ್ಜಿಯಲ್ಲಿ ಅರ್ಜಿಯ ಮೆಮೋರ್‍ಯಾಂಡಮ್‌ನಲ್ಲಿ ನಿರೂಪಿಸಿದಂತೆ ಹಲವಾರು ಆಧಾರಗಳನ್ನು ತೋರಿಸಲಾಗಿದೆ. 1ನೇ ಎದುರುದಾರರು ಆಕ್ಷೇಪಣೆಗಳನ್ನು ಸಲ್ಲಿಸಿದ್ದಾರೆ.

10. 2ನೇ ಎದುರುದಾರ – ನಾಗರತ್ನಮ್ಮಳ ಪರ ಮಾನ್ಯ ನ್ಯಾಯವಾದಿಯು ಈ ಮುಂದಿನಂತೆ ಬಲವಾದ ವಾದವನ್ನು ಮಂಡಿಸಿದ್ದಾರೆ: ಪ್ರಶ್ನಿತ ಆದೇಶವು ವಜಾಗೊಂಡರೆ ದಾವೆಯು ಸ್ವಯಂ ವರ್ಚಸ್ಸಿನಿಂದ ಪುನರ್ ಸ್ಥಾಪಿತಗೊಳ್ಳುತ್ತದೆ. ಆದ್ದರಿಂದ ಭಾರತ ಸಂವಿಧಾನದ 227ನೇ ಅನುಚ್ಛೇದದ ಅಡಿಯಲ್ಲಿನ ಪ್ರಸ್ತುತ ಅರ್ಜಿಯು ಸಮರ್ಥನೀಯವಾದುದಲ್ಲವೇ ಅಲ್ಲ, ಹಾಗಾಗಿ ಸಿವಿಲ್ ಪ್ರಕ್ರಿಯಾ ಸಂಹಿತೆಯ 115ನೇ ಪ್ರಕರಣದ ಅಡಿಯಲ್ಲಿನ ಸಿವಿಲ್ ಪರಿಷ್ಕರಣಾ ಅರ್ಜಿಯು ತಾನೊಂದೇ ಸಮರ್ಥನೀಯವಾಗಿ ನಿಲ್ಲುವುದಿಲ್ಲವೆಂದು ವಾದಿಸಿದ್ದಾರೆ. ಮುಂದುವರಿದು, ಅರ್ಜಿದಾರಳು ತಾನೇ ಸ್ವತಃ ದಾವೆಯನ್ನು ವಜಾಗೊಳಿಸಿಕೊಂಡಿದ್ದಾಳೆ ಮತ್ತು ಆಕೆಯನ್ನು ವಜಾಗೊಳಿಸಿಕೊಳ್ಳುವಂತೆ ಯಾರೂ ಕೇಳಿರಲಿಲ್ಲ. ಅದೇ ವ್ಯಾಜ್ಯ ಕಾರಣದ ಮೇಲೆ ಹೊಸ ದಾವೆಯನ್ನು ಹಾಕುವುದಕ್ಕೆ ಅನುಮತಿ ಪಡೆಯದೆ ಘೋಷಣೆಗಾಗಿನ ದಾವೆಯನ್ನು ವಜಾಗೊಳಿಸಿಕೊಂಡಿದ್ದಾಗ ಅದನ್ನು ಪುನರ್ ಸ್ಥಾಪಿಸಲು ಸಾಧ್ಯವಿಲ್ಲವೆಂದು ವಾದಿಸಿದ್ದಾರೆ. ಅಲ್ಲದೆ, ದಾವೆಯುನ್ನು ವಜಾಗೊಳಿಸಿಕೊಂಡರೆ ಆಗ ಆಕೆಯ ಪರವಾಗಿ ಪಿಂಚಣಿ ಪ್ರಯೋಜನಗಳನ್ನು ಇತ್ಯರ್ಥಪಡಿಸಲಾಗುವುದು ಎಂದು ವಾದಿಗೆ ಪ್ರತಿವಾದಿಗಳು ಆಶ್ವಾಸನೆಯನ್ನು ನೀಡಿದ್ದಾರೆ ಎಂದು ಆಪಾದಿಸಿರುವುದು ಒಂದು ಕಟ್ಟು ಕಥೆಯಾಗಿದೆ ಮತ್ತು ಅದನ್ನು ಸಮರ್ಥಿಸಿಕೊಳ್ಳುವುದು ಆಕೆಗೆ ಯಾವುದೇ ರೀತಿಯಲ್ಲೂ ಸಾಧ್ಯವಿಲ್ಲ. ಆಕೆಯು ಸಲ್ಲಿಸಿರುವ ಮೆಮೋದಲ್ಲಿ ಮಾಡಿರುವ ಅಂಥ ಒಂದು ಉಲ್ಲೇಖವು ಎಲ್ಲಿಯೂ ಸಹಾಯಕ್ಕೆ ಬರುವುದಿಲ್ಲ ಎಂದು ವಾದಿಸಿದ್ದಾರೆ.

11. ಅರ್ಜಿದಾರಳ ಪರ ಮಾನ್ಯ ನ್ಯಾಯವಾದಿ ಶ್ರೀಮತಿ ಮೈತ್ರೇಯಿ ಕೃಷ್ಣನ್ ಅವರು, ***ಜೆಟ್ ಪ್ಲೈವುಡ್ ಪ್ರೈವೇಟ್ ಲಿಮಿಟೆಡ್ ಮತ್ತು ಇನ್ನೊಬ್ಬರು -ವಿರುದ್ಧ- ಮಧುಕರ್ ನೌಲಾಕಾ*** [1], ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿದ ತೀರ್ಪನ್ನು ಮತ್ತು ***ಜೆಟ್ ಪ್ಲೈವುಡ್ (ಪ್ರೈ) ಲಿಮಿಟೆಡ್*** ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ಆಧಾರವಾಗಿಟ್ಟುಕೊಂಡ ***ರಾಮೇಶ್ವರ್ ಸರ್ಕಾರ್ -ವಿರುದ್ಧ- ಪಶ್ಚಿಮ ಬಂಗಾಳ ರಾಜ್ಯ ಸರ್ಕಾರ ಮತ್ತು ಇತರರು*** [2], ಮೊಕದ್ದಮೆಯಲ್ಲಿ ಕಲ್ಕತ್ತಾ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ನೀಡಿದ ಮತ್ತೊಂದು ತೀರ್ಪನ್ನು ಆಧಾರವಾಗಿಟ್ಟುಕೊಂಡಿದ್ದಾರೆ. ಇಂಥ ಒಬ್ಬಳು ಮಹಿಳೆಗೆ ಆಗಿರುವ ಅನ್ಯಾಯವನ್ನು ನಿವಾರಿಸುವುದಕ್ಕೆ ಸಿವಿಲ್ ಪ್ರಕ್ರಿಯಾ ಸಂಹಿತೆಯ 151ನೇ ಪ್ರಕರಣದ ಅಡಿಯಲ್ಲಿ ಸಿವಿಲ್ ನ್ಯಾಯಾಲಯಕ್ಕೆ ಇರುವ ಅಂತರ್ನಿಹಿತ ಅಧಿಕಾರವೇ ಸಾಕಷ್ಟಾಗುತ್ತದೆ ಮತ್ತು ಮುಖ್ಯವಾಗಿ ಪಕ್ಷಕಾರರ ನಡುವೆ ನ್ಯಾಯವನ್ನು ಒದಗಿಸುವ ಮಾರ್ಗದಲ್ಲಿ ತಾಂತ್ರಿಕತೆಗಳು ಅಡ್ಡಿಯಾಗಬಾರದು ಎಂದು ವಾದಿಸಲಾಗಿದೆ.

12. ದಾಖಲೆಗಳನ್ನು ಪರಿಶೀಲಿಸಿದ ನಂತರ ಮತ್ತು ಪಕ್ಷಕಾರರ ಪರ ಮಾನ್ಯ ನ್ಯಾಯವಾದಿಗಳ ಅಹವಾಲುಗಳನ್ನು ಆಲಿಸಿದ ನಂತರ ಈ ಕೆಳಕಂಡ ಅಂಶಗಳು ನನ್ನ ಪರಿಗಣನೆಗೆ ಉದ್ಭವವಾಗುತ್ತವೆ:

(1) ಪ್ರಸ್ತುತ ಮೊಕದ್ದಮೆಯಲ್ಲಿ 227ನೇ ಅನುಚ್ಛೇದದ ಅಡಿಯಲ್ಲಿನ ಅರ್ಜಿಯು ಸಮರ್ಥನೀಯವಾದುದಾಗಿದೆಯೇ?

(2) ದಿನಾಂಕ 4.6.2012ರ ಮೆಮೋ ಆಧರಿಸಿ ದಾವೆಯ ವಜಾವನ್ನು ತಳ್ಳಿಹಾಕುವುದಕ್ಕೆ ಸಿವಿಲ್ ಪ್ರಕ್ರಿಯಾ ಸಂಹಿತೆಯ 151ನೇ ಪ್ರಕರಣದ ಅಡಿಯಲ್ಲಿ ಸಿವಿಲ್ ನ್ಯಾಯಾಲಯಕ್ಕೆ ನಿಹಿತವಾಗಿರುವ ಅಂತರ್ನಿಹಿತ ಅಧಿಕಾರವನ್ನು ಬಳಸಲು ಇದು ಸೂಕ್ತ ಮೊಕದ್ದಮೆಯಾಗಿದೆಯೇ?

1. ಎಐಆರ್ 2006 ಎಸ್‌ಸಿ 1260 2. ಎಐಆರ್ 1986 ಸಿಎಎಲ್ 19

## ಕಾರಣಗಳು

13. **ಅಂಶ ಸಂಖ್ಯೆ (1)**: ಈ ಅರ್ಜಿದಾರಳು ಬೆಂಗಳೂರಿನ ನಗರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದ ಮುಂದೆ ಓ.ಎಸ್.6870/09ರಲ್ಲಿ ವಾದಿಯಾಗಿದ್ದು, ಬೆಂಗಳೂರಿನ ಜಿಕೆವಿಕೆ ಕ್ಯಾಂಪಸ್‌ನ ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಆಡಳಿತಾಧಿಕಾರಿಯ ವಿರುದ್ಧ ಮತ್ತು ಸೇವಾ ಪುಸ್ತಕದಲ್ಲಿ ನಾಮ ನಿರ್ದೇಶಿತಳೆಂದು ತನ್ನ ಹೆಸರನ್ನು ತೋರಿಸಿರುವುದನ್ನು ಆಧರಿಸಿ ತಾನು ಕೃಷ್ಣಾಚಾರಿಯ ಕಾನೂನುಬದ್ಧವಾಗಿ ವಿವಾಹವಾದ ಪತ್ನಿಯೆಂದೂ ಸಹ ಕ್ಲೇಮು ಮಾಡಿದ ಶ್ರೀಮತಿ ನಾಗರತ್ನಮ್ಮ ಅಲಿಯಾಸ್ ನಾಗವೇಣಮ್ಮಳ ವಿರುದ್ಧ ದಾವೆಯನ್ನು ಹೂಡಿದ್ದಳು.

14. ಓ.ಎಸ್.6870/09 ಸಂಖ್ಯೆಯ ದಾವೆಯಲ್ಲಿ ಕೃಷ್ಣಾಚಾರಿಯ ಸಾವಿನ ಪರಿಣಾಮವಾಗಿ ಆಕೆಯು ಕೋರಿದ ಪರಿಹಾರಗಳು ಈ ಕೆಳಕಂಡಂತಿವೆ:

> ಆದ್ದರಿಂದ, ವಾದಿಯು, ಈ ಕೆಳಕಂಡಂತೆ ಪ್ರತಿವಾದಿಗಳ ವಿರುದ್ಧ ತೀರ್ಪು ಮತ್ತು ಆದೇಶವನ್ನು ಹೊರಡಿಸುವಂತೆ ಈ ಘನ ನ್ಯಾಯಾಲಯವನ್ನು ಅತ್ಯಂತ ಗೌರವ ಪೂರ್ವಕವಾಗಿ ವಿನಂತಿಸಿಕೊಳ್ಳುತ್ತಿದ್ದಾರೆ:
>
> *ಎ) ವಾದಿಯು ದಿವಂಗತ ಕೃಷ್ಣಾಚಾರಿಯ ಕಾನೂನುಬದ್ಧವಾಗಿ ವಿವಾಹವಾದ ಪತ್ನಿಯೆಂದು ಘೋಷಿಸುವುದು;*
>
> *ಬಿ) ಮೃತ ಕೃಷ್ಣಾಚಾರಿಯ ನಿಯೋಜಕರು ಸಂದಾಯ ಮಾಡಬೇಕಾದ ಪಿಂಚಣಿ, ಉಪದಾನ, ವಿಮೆ ಮುಂತಾದ ವಿತ್ತೀಯ ಪ್ರಯೋಜನಗಳನ್ನು ಮೃತ ಕೃಷ್ಣಾಚಾರಿಯ ಪತ್ನಿಯೆಂದು ಸುಳ್ಳು ಕ್ಲೇಮು ಮಾಡುತ್ತಿರುವ 2ನೇ ಪ್ರತಿವಾದಿಗೆ ಬಟವಾಡೆ ಮಾಡದಿರುವುದು;*

*ಸಿ) ಪಿಂಚಣಿ ಪ್ರಯೋಜನಗಳನ್ನು ಮತ್ತು ಮೊಕದ್ದಮೆಯ ಸಂಗತಿಗಳು ಮತ್ತು ಪರಿಸ್ಥಿತಿಗಳ ಅಡಿಯಲ್ಲಿ ಮಾನ್ಯ ನ್ಯಾಯಾಲಯವು ಮಂಜೂರು ಮಾಡುವುದು ಸೂಕ್ತವೆಂದು ಭಾವಿಸುವಂಥ ಇತರ ಪರಿಹಾರವನ್ನು / ಗಳನ್ನು ವಾದಿಗೆ ನೀಡುವುದು;*

*ಡಿ) ನ್ಯಾಯ ಮತ್ತು ಸಮಾನತೆಯ ಹಿತಾಸಕ್ತಿಯಲ್ಲಿ ವಾದಿಗೆ ವೆಚ್ಚಗಳನ್ನು ನೀಡಲು ಆದೇಶಿಸುವುದು.*

ಸದರಿ ದಾವೆಯಲ್ಲಿ, 2ನೇ ಪ್ರತಿವಾದಿಯು 15.10.2010ರಂದು ವಿವರವಾದ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾಳೆ. ವಾದಿಯು 12.4.2012ರಂದು ಮುಖ್ಯ ವಿಚಾರಣೆಯ ಬದಲಾಗಿ ಅಫಿಡವಿಟ್‌ಅನ್ನು ಸಲ್ಲಿಸಿರುತ್ತಾಳೆ. 4.6.2012ರಂದು ಆಕೆಯು ಹೊಸ ದಾವೆಯನ್ನು ಸಲ್ಲಿಸಲು ಅನುಕೂಲವಾಗುವಂತೆ ಸ್ವಾತಂತ್ರ್ಯ ನೀಡುವುದಕ್ಕೆ ಉದ್ದೇಶಿಸದೆ ದಾವೆಯನ್ನು ವಜಾಗೊಳಿಸುವಂತೆ ಮತ್ತು ಮೂಲ ದಾಖಲೆಗಳನ್ನು ಹಿಂದಿರುಗಿಸುವಂತೆ ಕೋರಿ ನ್ಯಾಯಾಲಯದ ಮುಂದೆ ಮೆಮೋ ಸಲ್ಲಿಸುತ್ತಾಳೆ.

15. ದಾವೆಯನ್ನು ವಜಾಗೊಳಿಸುವುದಕ್ಕೆ ಆಧಾರವಾದ, 4.6.2012ರಂದು ಸಲ್ಲಿಸಿದ ಮೆಮೋ ಈ ಕೆಳಕಂಡಂತಿದೆ:

## ಮೆಮೋ

*ವಾದಿಗೆ ಮೇಲ್ಕಂಡ ಮೊಕದ್ದಮೆಯನ್ನು ಪ್ರಾಸಿಕ್ಯೂಟ್ ಮಾಡುವ ಉದ್ದೇಶವಿರುವುದಿಲ್ಲ ಮತ್ತು ವಾದಿಯ ದಾವೆಯನ್ನು ಹೊಸ ದಾವೆಯನ್ನು ಹೂಡಲು ವಾದಿಗೆ ನೀಡಬಹುದಾದ ಸ್ವಾತಂತ್ರ್ಯಕ್ಕೆ ಅವಕಾಶವಿಲ್ಲದಂತೆ ವಜಾಗೊಳಿಸಬಹುದೆಂದು ಮತ್ತು ನ್ಯಾಯದ ಹಿತಾಸಕ್ತಿಯಲ್ಲಿ ಮೂಲ ದಸ್ತಾವೇಜುಗಳನ್ನು ಹಿಂದಿರುಗಿಸುವಂತೆ ಕಚೇರಿಗೆ ನಿರ್ದೇಶನ*

*ನೀಡಬೇಕೆಂದು ವಾದಿಯು ವಿನಯಪೂರ್ವಕವಾಗಿ ಈ ಘನ ನ್ಯಾಯಾಲಯವನ್ನು ಪ್ರಾರ್ಥಿಸಿದ್ದಾರೆ.*

*ಸಹಿ/–*

*ವಾದಿ.*

ಬೆಂಗಳೂರು

ದಿನಾಂಕ: 4.6.2012

ದಿನಾಂಕ 4.6.2012ರ ಮೆಮೋ ಆಧರಿಸಿ 22.7.2013ರಂದು ಹೊರಡಿಸಿದ ಆದೇಶ ಈ ಕೆಳಕಂಡಂತಿದೆ:

> 'ವಾದಿ ಹಾಜರಿದ್ದಾರೆ. ಹೆಚ್‌ಆರ್‌ಎಸ್ ಮೆಮೋ ಸಲ್ಲಿಸಿದ್ದಾರೆ. ಆದ್ದರಿಂದ ವಾದಿಯ ದಾವೆಯನ್ನು ಈ ಮೂಲಕ ಪ್ರಾರ್ಥಿಸಿದಂತೆ ವಜಾಗೊಳಿಸಲಾಗಿದೆ. ಸಹಿ ಮಾಡಿದ ಪ್ರಮಾಣೀಕೃತ ಪ್ರತಿಯನ್ನು ಪಡೆದುಕೊಂಡ ನಂತರ ಮೂಲ ದಸ್ತಾವೇಜುಗಳನ್ನು ಹಿಂದಿರುಗಿಸುವುದು.'

ಈ ಆದೇಶವನ್ನೇ ಅರ್ಜಿದಾರರು, ಓ.ಎಸ್.6870/09, ದಾವೆಯಲ್ಲಿ ಸಿವಿಲ್ ಪ್ರಕ್ರಿಯಾ ಸಂಹಿತೆಯ 151ನೇ ಪ್ರಕರಣದ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸುವ ಮೂಲಕ ಅದನ್ನು ತಳ್ಳಿ ಹಾಕುವಂತೆ ಮಾಡಲು ಬಯಸಿದ್ದಾರೆ.

16. ***(ಮೇಲೆ ತಿಳಿಸಿದ) ಜೆಟ್ ಪ್ಲೈವುಡ್*** ಮೊಕದ್ದಮೆಯಲ್ಲಿರುವ ಸಂಗತಿಗಳ ಪ್ರಕಾರ, ಅದರಲ್ಲಿನ ಎದುರುದಾರ, ಮಧುಕರ್ ನೌಲಾಕಾ ದಾವೆಯನ್ನು ಹಿಂಪಡೆಯುತ್ತಿರುವಂತೆ ವಜಾಗೊಳಿಸಲು ಅರ್ಜಿಯನ್ನು ಸಲ್ಲಿಸಿದ್ದರು. ದಿನಾಂಕ 11.7.2004ರಂದು, ಮಾನ್ಯ ನ್ಯಾಯಾಧೀಶರು ಸದರಿ ಅರ್ಜಿಯನ್ನು ಪುರಸ್ಕರಿಸಿದರು. ಆದರೆ ಅದೇ ವ್ಯಾಜ್ಯ ಕಾರಣದ ಮೇಲೆ ಹೊಸ ದಾವೆಯನ್ನು ಹೂಡಲು ಸ್ವಾತಂತ್ರ್ಯ ನೀಡಿರಲಿಲ್ಲ. ಆದಾದ ಒಂದು ತಿಂಗಳೊಳಗೆ ಎಂದರೆ, 23.8.2004ರಂದು ವಾದಿ ಮಧುಕರ್ ನೌಲಾಕಾ ದಾವೆಯನ್ನು ಹಿಂಪಡೆದುಕೊಂಡಂತೆ ವಜಾಗೊಳಿಸಿದ

ಆದೇಶವನ್ನು ವಾಪಸ್ ಪಡೆಯುವುದಕ್ಕಾಗಿ ಸ್ವಾಮ್ಯ ದಾವೆ ಸಂ.32/03ರಲ್ಲಿ ಅರ್ಜಿಯನ್ನು ದಾಖಲಿಸಿದ. ಹಾಗೆ ಅರ್ಜಿಯನ್ನು ಸಲ್ಲಿಸುವಲ್ಲಿ ತನ್ನನ್ನು ತಪ್ಪು ದಾರಿಗೆಳೆಯಲಾಗಿತ್ತು ಮತ್ತು ಬಿಸ್ವರೂಪ್ ಬ್ಯಾನರ್ಜಿ ಮತ್ತು ಇತರ ಸಹ-ಮಾಲೀಕರು ಸ್ವತ್ತನ್ನು ತಮಗೆ ಮಾರಾಟ ಮಾಡುತ್ತೇವೆಂದು ತಪ್ಪು ದಾರಿಗೆಳೆದ ಕಾರಣದಿಂದ ತಾನು ದಾವೆಯನ್ನು ಹಿಂಪಡೆದಿದ್ದೆ ಎಂಬುದು ಆತನ ವಾದವಾಗಿತ್ತು.

17. ಅಲಿಪುರ್‌ನ ಮಾನ್ಯ ಸಿವಿಲ್ ನ್ಯಾಯಾಧೀಶರ (ಹಿರಿಯ ಶ್ರೇಣಿ) ನ್ಯಾಯಾಲಯವು ಮಧುಕರ್ ನೌಲಾಖಾ ಸಲ್ಲಿಸಿದ ಸದರಿ ಅರ್ಜಿಯನ್ನು ರದ್ದುಗೊಳಿಸಿತು. ಆ ನಂತರ ಆತನು ಸ್ವಾಮ್ಯ ದಾವೆ ಸಂ.87/04ರಲ್ಲಿ ಎರಡನೇ ಸ್ವಾಮ್ಯ ದಾವೆಯನ್ನು ಹೂಡಿದ್ದು ಅದು ಇತ್ಯರ್ಥದಲ್ಲಿತ್ತು. ಸ್ವಾಮ್ಯ ದಾವೆ ಸಂ.87/04ರಲ್ಲಿ ಮಧ್ಯಂತರ ಪ್ರತಿಬಂಧಕಾಜ್ಞೆಗಾಗಿ ಸಲ್ಲಿಸಿದ್ದ ಆತನ ಕೋರಿಕೆಯನ್ನು ತಿರಸ್ಕರಿಸಲಾಯಿತು. 23.12.2004ರಂದು ಮಧುಕರ್ ದಿನಾಂಕ 11.2.2004ರ ಅಧಿವಿಚಾರಣಾ ನ್ಯಾಯಾಲಯದ ಮುಂಚಿನ ಆದೇಶವನ್ನು ಹಿಂಪಡೆಯುವುದಕ್ಕೆ ನಿರಾಕರಿಸಿದ ಅದರ ದಿನಾಂಕ 24.9.2004ರ ಆದೇಶವನ್ನು ಪ್ರಶ್ನಿಸಿ ಸಿ.ಓ.3982/04ರಲ್ಲಿ ಕಲ್ಕತ್ತಾ ಉಚ್ಚ ನ್ಯಾಯಾಲಯದ ಮುಂದೆ ಅರ್ಜಿ ಸಲ್ಲಿಸಿದನು. ಭಾರತ ಸಂವಿಧಾನದ 227ನೇ ಅನುಚ್ಛೇದದ ಅಡಿಯಲ್ಲಿ ಸಲ್ಲಿಸಲಾದ ಸದರಿ ಅರ್ಜಿಯನ್ನು ಪುರಸ್ಕರಿಸಲಾಯಿತು.

18. ದಿನಾಂಕ 4.2.2005ರಂದು, ಕಲ್ಕತ್ತಾ ಉಚ್ಚ ನ್ಯಾಯಾಲಯದ ಮಾನ್ಯ ಏಕ ಸದಸ್ಯ ಪೀಠವು ಸಿ.ಓ. 3982/04 ಅರ್ಜಿಯನ್ನು ಪುರಸ್ಕರಿಸಿ ಅಲಿಪುರದ ಸಿವಿಲ್ ನ್ಯಾಯಾಧೀಶರ (ಹಿರಿಯ ಶ್ರೇಣಿ) ನ್ಯಾಯಾಲಯದ ಮುಂದೆ ಸ್ವಾಮ್ಯ ದಾವೆ ಸಂ.32/02ಅನ್ನು ಅಧಿವಿಚಾರಣೆಗಾಗಿ ಪುನಶ್ಚೇತನಗೊಳಿಸಿತು. ಇದನ್ನು ಮುಖ್ಯವಾಗಿ ಬ್ಯಾನರ್ಜಿ ಮತ್ತು ಇತರ ಸಹ-ಮಾಲೀಕರು, 4.2.2005ರಂದು ವಿಚಾರಣೆಗೆ ತಮ್ಮ ವಕೀಲರು ಹಾಜರಾಗಲು ಸಾಧ್ಯವಾಗಿರಲಿಲ್ಲ ಎಂಬ ಕಾರಣದ ಮೇಲೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಪ್ರಶ್ನಿಸಿದ್ದರು. ಆದ್ದರಿಂದ ಅವರು ದಿನಾಂಕ 4.2.2005ರ ಆದೇಶವನ್ನು ಹಿಂಪಡೆಯುವಂತೆ ಮಾನ್ಯ ಏಕ ಸದಸ್ಯ ಪೀಠದ ಮುಂದೆ ಸಿಎಎನ್. ಸಂ.1999/05ರಲ್ಲಿ ಅರ್ಜಿಯನ್ನು ಸಲ್ಲಿಸಿದರು. ಸದರಿ ಅರ್ಜಿಯ ವಾದ-ಪ್ರತಿವಾದಗಳ ನಂತರ ದಿನಾಂಕ 14.3.2005ರ ಆದೇಶದ

ಮೂಲಕ ವಜಾಗೊಂಡಿತು ಮತ್ತು ಆ ಕಾರಣದಿಂದಾಗಿ 4.2.2005ರಂದು ದಾವೆಯನ್ನು ಪುನಶ್ಚೇತನಗೊಳಿಸಿದ ಆದೇಶವು ಪುನರ್ ದೃಢೀಕೃತವಾಯಿತು.

19. ಅದರ ಪರಿಣಾಮವಾಗಿ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಮುಂದೆ ಎರಡು ವಿಶೇಷ ಅನುಮತಿ ಅರ್ಜಿಗಳು ಸಲ್ಲಿಕೆಯಾದವು. ಅವುಗಳಲ್ಲಿ ಒಂದು ದಿನಾಂಕ 4.2.2005ರ ಆದೇಶದ ಮೂಲಕ ಸ್ವಾಮ್ಯ ದಾವೆಯನ್ನು ಪುನಶ್ಚೇತನಗೊಳಿಸಿದ್ದಕ್ಕೆ ಸಂಬಂಧಿಸಿದ್ದು. ಮತ್ತೊಂದು ದಿನಾಂಕ 4.2.2005ರ ಆದೇಶವನ್ನು ಹಿಂಪಡೆಯುವಂತೆ ಸಲ್ಲಿಸಿದ ಅರ್ಜಿಯನ್ನು ವಜಾಗೊಳಿಸಿದ ದಿನಾಂಕ 14.3.2005ರ ಆದೇಶವನ್ನು ಪ್ರಶ್ನಿಸಿದ್ದು. ಎರಡೂ ವಿಶೇಷ ಅನುಮತಿ ಅರ್ಜಿಗಳನ್ನು (ಎಸ್.ಎಲ್.ಪಿ) ಒಟ್ಟಾಗಿ ಒಂದೇ ವಿಚಾರಣೆಗೆ ತೆಗೆದುಕೊಳ್ಳಲಾಯಿತು. ಆ ಎಸ್.ಎಲ್.ಪಿ.ಗಳನ್ನು ಪರಿಗಣಿಸುವಾಗ ಮಾನ್ಯ ಸರ್ವೋಚ್ಚ ನ್ಯಾಯಾಲಯವು ರೂಪಿಸಿಕೊಂಡ ಪ್ರಶ್ನೆಯು ಈ ಕೆಳಕಂಡಂತಿದೆ:

> ಅನುಮತಿಯನ್ನು ಕೋರಿಲ್ಲದಿದ್ದರೂ ಅಥವಾ ಅನುಮತಿಯನ್ನು ನೀಡದಿದ್ದರೂ ನಿರ್ದಿಷ್ಟವಾಗಿ ನಿರಾಕರಿಸಿದ ವಿನಾ 1ನೇ ಎದುರುದಾರ–ವಾದಿಯ ದಾವೆಯನ್ನು ಪುನಶ್ಚೇತನಗೊಳಿಸುವಲ್ಲಿ ಕಲ್ಕತ್ತಾ ಉಚ್ಚ ನ್ಯಾಯಾಲಯದ ಮಾನ್ಯ ಏಕ ಸದಸ್ಯ ಪೀಠವು ತನ್ನ ಅಧಿಕಾರ ವ್ಯಾಪ್ತಿಯಲ್ಲಿಯೇ ಕಾರ್ಯ ನಿರ್ವಹಿಸಿದೆಯೇ?

ಸರ್ವೋಚ್ಚ ನ್ಯಾಯಾಲಯದ ಮುಂದೆ ***ಜೆಟ್ ಪ್ಲೈವುಡ್*** ಪರವಾಗಿ ಈ ಮುಂದಿನಂತೆ ವಾದವನ್ನು ಮಂಡಿಸಲಾಗಿತ್ತು. ಅದೇನೆಂದರೆ, ಹೊಸ ದಾವೆಯನ್ನು ಹೂಡುವುದಕ್ಕೆ ಅನುಮತಿ ಕೋರಿ ಯಾವುದೇ ಕೋರಿಕೆಯನ್ನು ಸಲ್ಲಿಸದಿರುವಲ್ಲಿ ಮತ್ತು ಆ ಬಗ್ಗೆ ನಿರ್ದಿಷ್ಟ ಪ್ರತಿಷೇಧವು ಸಿಪಿಸಿ ಕ್ರಮಾದೇಶ ಸಂ.XXIIIರ ನಿಯಮ–1 ರಲ್ಲಿ ಒಳಗೊಂಡಿದ್ದು, ದಾವೆಯನ್ನು ಹಿಂಪಡೆಯುವುದಕ್ಕೆ ಸಲ್ಲಿಸಿದ ಅರ್ಜಿಯನ್ನು ಹಿಂಪಡೆಯುವುದಕ್ಕೆ ನೀಡುವ ಅನುಮತಿಯು ಅವಕಾಶಯೋಗ್ಯವಾದುದಲ್ಲ,

ಸರಿಯಾದುದಲ್ಲ ಹಾಗೂ ಸೂಕ್ತವಾದುದಲ್ಲ, ಆದ್ದರಿಂದ ದಿನಾಂಕ 11.7.2004ರ ಆದೇಶದ ಮೂಲಕ ದಾವೆಯನ್ನು ಹಿಂಪಡೆಯುವುದಕ್ಕಾಗಿ ಸಲ್ಲಿಸಿದ ಅರ್ಜಿಯನ್ನು ಪುರಸ್ಕರಿಸಲು ಅಧಿವಿಚಾರಣಾ ನ್ಯಾಯಾಲಯ ಅಥವಾ ಉಚ್ಚ ನ್ಯಾಯಾಲಯಕ್ಕೆ ಯಾವುದೇ ಅವಕಾಶವಿಲ್ಲವೆಂದು ವಾದಿಸಲಾಗಿತ್ತು.

20. ಅದರಲ್ಲಿನ ಎದುರುದಾರರನ್ನು ಪ್ರತಿನಿಧಿಸಿದ ಮಾನ್ಯ ನ್ಯಾಯವಾದಿಯು ಮಂಡಿಸಿದ ವಾದವನ್ನಾಧರಿಸಿ, ಆ ಪರಿಸ್ಥಿತಿಯಲ್ಲಿ ಅಂಥ ಒಂದು ಅಧಿಕಾರವನ್ನು ಸಿಪಿಸಿ 151ನೇ ಪ್ರಕರಣದ ಅಡಿಯಲ್ಲಿ ಚಲಾಯಿಸಬೇಕೇ ಅಥವಾ ಬೇಡವೇ ಎಂಬ ಬಗ್ಗೆ ನಿರ್ಣಯವನ್ನು ನೀಡುವುದು ಸರ್ವೋಚ್ಚ ನ್ಯಾಯಾಲಯಕ್ಕೆ ಸಮ್ಮತವಾದುದಾಗಿತ್ತು. ಅಧಿವಿಚಾರಣಾ ನ್ಯಾಯಾಲಯದ ಮಾನ್ಯ ನ್ಯಾಯಾಧೀಶರು ಸಿಪಿಸಿ 151ನೇ ಪ್ರಕರಣದ ಅಡಿಯಲ್ಲಿ ನ್ಯಾಯಾಲಯಕ್ಕೆ ನಿಹಿತವಾದ ಅಧಿಕಾರವನ್ನು ಚಲಾಯಿಸುವ ಆಯ್ಕೆಯನ್ನು ಮಾಡಿಕೊಂಡಿರಲಿಲ್ಲವಾದ್ದರಿಂದ ಉಚ್ಚ ನ್ಯಾಯಾಲಯವು ಅದರಲ್ಲಿನ 1ನೇ ಎದುರುದಾರನು ಹೂಡಿದ ದಾವೆಯನ್ನು ಪುನರ್ ಸ್ಥಾಪಿಸುವ ಸಲುವಾಗಿ ಭಾರತ ಸಂವಿಧಾನದ 227ನೇ ಅನುಚ್ಛೇದದ ಅಡಿಯಲ್ಲಿ ಅದರ ಅಧಿಕಾರವನ್ನು ಚಲಾಯಿಸಿ ಮುಂದಡಿಯಿಟ್ಟಿತ್ತು.

21. ವಾಸ್ತವವಾಗಿ ***(ಮೇಲೆ ತಿಳಿಸಲಾದ) ರಾಮೇಶ್ವರ ಸರ್ಕಾರ್*** ಮೊಕದ್ದಮೆಯಲ್ಲಿ ಮಾನ್ಯ ಕಲ್ಕತ್ತಾ ಉಚ್ಚ ನ್ಯಾಯಾಲಯದ ವಿಭಾಗೀಯ ಪೀಠವು ನೀಡಿದ ತೀರ್ಪನ್ನು ಆಧಾರವಾಗಿಟ್ಟುಕೊಳ್ಳಲಾಗಿದ್ದು ಅದರಲ್ಲಿ, ಪ್ರಾಸಿಕ್ಯೂಷನ್ ನಡೆಸದಿರುವುದಕ್ಕಾಗಿನ ದಾವೆಯನ್ನು ವಜಾಗೊಳಿಸಿದ ಆದೇಶವನ್ನು ರದ್ದುಪಡಿಸಿದ ನಂತರ ದಾವೆಯನ್ನು ಹಿಂಪಡೆಯಲು ಅನುಮತಿ ನೀಡುವುದಕ್ಕೆ ಸಿಪಿಸಿ 151ನೇ ಪ್ರಕರಣದ ಅಡಿಯಲ್ಲಿ ಸಿವಿಲ್ ನ್ಯಾಯಾಲಯವು ಅಂತರ್ನಿಹಿತ ಅಧಿಕಾರವನ್ನು ಹೊಂದಿದೆಯೆಂದು ಒತ್ತಿ ಹೇಳಲಾಗಿದೆ. ಅಲ್ಲದೆ, ಹೊಸ ದಾವೆಯನ್ನು ಹೂಡಲು ಸ್ವಾತಂತ್ರ್ಯವನ್ನು ನೀಡಿ ಅಥವಾ ನೀಡದೆಯೇ ದಾವೆಯುನ್ನು ಹಿಂಪಡೆಯುವುದಕ್ಕೆ ಸಿಪಿಸಿ ಕ್ರಮಾದೇಶ XXIII ನಿಯಮ-1 ಉಪಬಂಧ ಕಲ್ಪಿಸುತ್ತದೆಯೆಂದು ತಿಳಿಸಲಾಗಿದೆ. ಅಷ್ಟೇ ಅಲ್ಲದೆ ಸಿಪಿಸಿ 151ನೇ ಪ್ರಕರಣವು ಸಾಕಷ್ಟು ವಿಸ್ತಾರವಾದ ವ್ಯಾಪ್ತಿಯುಳ್ಳದಾಗಿದ್ದು ದಾವೆಯನ್ನು ಹಿಂಪಡೆಯುವುದಕ್ಕಾಗಿನ ಅರ್ಜಿಯನ್ನು

ಹಿಂಪಡೆಯಲು ಅನುಮತಿಸುವುದಕ್ಕೆ ಸಮರ್ಥನೀಯ ಕಾರಣಗಳಿದ್ದರೆ, ಅಂತರ್ನಿಹಿತ ಅಧಿಕಾರವನ್ನು ಚಲಾಯಿಸಿ ದಾವೆಯನ್ನು ಹಿಂಪಡೆಯುವುದಕ್ಕಾಗಿನ ಅರ್ಜಿಯನ್ನು ಹಿಂಪಡೆಯಲು ಅನುಮತಿಸುವುದಕ್ಕೆ ನ್ಯಾಯಾಲಯವು ಅಧಿಕಾರ ರಹಿತವಾದುದೇನಲ್ಲವೆಂದು ಹೇಳಲಾಗಿದೆ.

22. ***ರಾಮೇಶ್ವರ್ ಸರ್ಕಾರ್*** ಮೊಕದ್ದಮೆಯ ಸಂಗತಿಗಳನ್ನು ಅವಲೋಕಿಸಿದರೆ, ರಾಮೇಶ್ವರ ಸರ್ಕಾರ್ ಅವರು ಪಶ್ಚಿಮ ಬಂಗಾಳ ರಾಜ್ಯ ಸರ್ಕಾರ ವಿರುದ್ಧ ಸಿಪಿಸಿ 115ನೇ ಪ್ರಕರಣದ ಅಡಿಯಲ್ಲಿ ಕಲ್ಕತ್ತಾ ಉಚ್ಚ ನ್ಯಾಯಾಲಯದ ಮುಂದೆ ಒಂದು ಪರಿಷ್ಕರಣಾ ಅರ್ಜಿಯನ್ನು ಸಲ್ಲಿಸಿದ್ದರು. ಆಗ ವಾದಕಾಲೀನ ಅರ್ಜಿಗಳ ಮೇಲೆ ಹೊರಡಿಸಿದ ಆದೇಶಗಳನ್ನು ಪ್ರಶ್ನಿಸಲು ನಿರ್ಬಂಧವನ್ನು ವಿಧಿಸಿ ಇನ್ನೂ ಸಿಪಿಸಿ 115ನೇ ಪ್ರಕರಣವನ್ನು ತಿದ್ದುಪಡಿ ಮಾಡಿರಲಿಲ್ಲ ಮತ್ತು ಸಿಪಿಸಿ 115ನೇ ಪ್ರಕರಣದಲ್ಲಿ ಅಂಥ ಒಂದು ನಿರ್ಬಂಧವು 1.7.2002ರಿಂದ ಜಾರಿಗೆ ಬಂದ ಉಪಬಂಧದಲ್ಲಿ ಕಾಣಿಸಿಕೊಂಡಿತು.

23. ***ಜೆಟ್ ಪ್ಲೈವುಡ್*** ಮತ್ತು ***ರಾಮೇಶ್ವರ್ ಸರ್ಕಾರ್*** ಎರಡೂ ಮೊಕದ್ದಮೆಗಳಲ್ಲಿನ (ಮೇಲೆ ತಿಳಿಸಿದ) ತೀರ್ಪುಗಳನ್ನು ಒಟ್ಟಾಗಿ ಅವಲೋಕಿಸಿದರೆ, ಒಂದು ದಾವೆಯನ್ನು ಅಂತಿಮವಾಗಿ ಭಾರತ ಸಂವಿಧಾನದ 227ನೇ ಅನುಚ್ಛೇದದ ಅಡಿಯಲ್ಲಿ ಅರ್ಜಿಯನ್ನು ಅನುಮತಿಸುವುದರ ಮೇಲೆ ಪುನರ್ ಸ್ಥಾಪಿಸಬಹುದಾಗಿದ್ದರೂ ಸಿಪಿಸಿ 151ನೇ ಪ್ರಕರಣದ ಅಡಿಯಲ್ಲಿ ಹೊರಡಿಸಿದ ಆದೇಶವು 227ನೇ ಅನುಚ್ಛೇದದ ಅಡಿಯಲ್ಲಿ ಒಂದು ಅರ್ಜಿಯನ್ನು ಸಲ್ಲಿಸುವ ಮೂಲಕ ಪ್ರಶ್ನಿಸುವುದಕ್ಕೆ ಒಳಪಟ್ಟಿರುತ್ತದೆಂಬುದು ಸುಸ್ಪಷ್ಟವಾಗುತ್ತದೆ. ಮತ್ತೊಂದು ರೀತಿಯಲ್ಲಿ ***ಜೆಟ್ ಪ್ಲೈವುಡ್*** ಮೊಕದ್ದಮೆಯಲ್ಲಿ ನಡೆದ ಘಟನೆಗಳ ಅನುಸಾರ ನೋಡಿದರೂ ಕೂಡ, ಸಿವಿಲ್ ಪ್ರಕ್ರಿಯಾ ಸಂಹಿತೆಯನ್ನು ಅದಾಗಲೇ 1.7.2002ರಿಂದ ಜಾರಿಗೆ ಬರುವಂತೆ ತಿದ್ದುಪಡಿ ಮಾಡಲಾಗಿತ್ತು ಮತ್ತು ಆ ಮೊಕದ್ದಮೆಯಲ್ಲಿ ಬರುವ ದಿನಾಂಕಗಳು 1.7.2002ರ ನಂತರದ ದಿನಾಂಕಗಳಾಗಿವೆ. ಅಧಿವಿಚಾರಣಾ ನ್ಯಾಯಾಲಯವು ಸಿಪಿಸಿ 151ನೇ ಪ್ರಕರಣದ ಅಡಿಯಲ್ಲಿನ ಅಧಿಕಾರವನ್ನು ಬಳಸಿಕೊಳ್ಳದಿದ್ದರಿಂದ ಭಾರತ ಸಂವಿಧಾನದ 227ನೇ ಅನುಚ್ಛೇದದ ಅಡಿಯಲ್ಲಿ ಅರ್ಜಿಯನ್ನು ಸಲ್ಲಿಸಲಾಗಿತ್ತು. ಕಲ್ಕತ್ತಾ ಉಚ್ಚ ನ್ಯಾಯಾಲಯವು, ಅಧಿವಿಚಾರಣಾ ನ್ಯಾಯಾಲಯಕ್ಕೆ ನಿಹಿತವಾದ ಅಧಿಕಾರ

ವ್ಯಾಪ್ತಿಯನ್ನು ಅದು ಚಲಾಯಿಸಿರಲಿಲ್ಲವೆಂಬ ಕಾರಣದ ಮೇಲೆ ಸಿಪಿಸಿ 151ನೇ ಪ್ರಕರಣದ ಅಡಿಯಲ್ಲಿನ ಅಂತರ್ನಿಹಿತ ಅಧಿಕಾರವನ್ನು ಚಲಾಯಿಸಿತ್ತು. ತದನುಸಾರವಾಗಿ ಭಾರತ ಸಂವಿಧಾನದ 227ನೇ ಅನುಚ್ಛೇದದ ಅಡಿಯಲ್ಲಿ ಸಲ್ಲಿಸಿದ ಅರ್ಜಿಯು ಸಮರ್ಥನೀಯವಾಗಿದೆ.

24. ***ಗಿರಿಜಾ ವಲ್ಲಭನ್ –ವಿರುದ್ಧ– ಜೆ.ಬಿ.ಜೆ. ಪ್ಲಾಂಟೇಷನ್ ಪ್ರೈ. ಲಿಮಿಟೆಡ್ ಮತ್ತು ಇತರರು***[3], ಮೊಕದ್ದಮೆಯಲ್ಲಿ ಕೇರಳ ಉಚ್ಚ ನ್ಯಾಯಾಲಯವು ಈ ಮುಂದಿನಂತೆ ನಿರ್ಣಯಿಸಿದೆ: 'ಭಾರತ ಸಂವಿಧಾನದ 227ನೇ ಅನುಚ್ಛೇದದ ಅಡಿಯಲ್ಲಿ ಪರಿಷ್ಕರಣಾ ಅರ್ಜಿ ಮತ್ತು ದಾವೆ ಎರಡರಲ್ಲೂ ಕೂಡ ಒಳಗೊಂಡಿರುವಂತಹದ್ದು ಉಚ್ಚ ನ್ಯಾಯಾಲಯದ ಮೇಲ್ವಿಚಾರಣಾ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸುವುದೇ ಆಗಿದೆ. ಪಕ್ಷಕಾರನ ಮಹತ್ವದ ಹಕ್ಕಿನ ಸಂಪರ್ಕವಿಲ್ಲದ ಪರಿಷ್ಕರಣೆ ರೂಪದ ಪರಿಹಾರವು ಸ್ವತಃ ಅಧೀನ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸುವುದಕ್ಕೆ ಲಭ್ಯವಿದ್ದು, ಅಧೀನ ನ್ಯಾಯಾಲಯವು ತನ್ನ ಅಧಿಕಾರದ ಸರಹದ್ದಿನೊಳಗೆ ಇರುವಂತೆ ನೋಡಿಕೊಳ್ಳಲು ಸರ್ಷಿಯೋರರಿ ರಿಟ್ ಅನ್ನು ಅಥವಾ ಮೇಲ್ವಿಚಾರಣಾ ಅಧಿಕಾರ ವ್ಯಾಪ್ತಿಯ ಚಲಾವಣೆಯನ್ನು ಮಾಡಿದ ಸಂದರ್ಭಗಳಲ್ಲಿ, 226/227ನೇ ಅನುಚ್ಛೇದದ ಅಡಿಯಲ್ಲಿ ಸಾಂವಿಧಾನಿಕ ಪರಿಹಾರವನ್ನು ಬಳಸಿಕೊಳ್ಳುವುದರಿಂದ ಬಾಧಿತ ವ್ಯಕ್ತಿಯನ್ನು ಅದು ನಿರ್ಬಂಧಿಸುವುದಿಲ್ಲ.'

25. ಪ್ರಸ್ತುತ ಮೊಕದ್ದಮೆಯಲ್ಲಿ, ವಾದಿಯು, ತಾನು ಸಲ್ಲಿಸಿದ ದಾವೆಯಲ್ಲಿ ತನ್ನ ಮುಖ್ಯವಾದ ಹಕ್ಕಿನ ನೆರವನ್ನು ಪಡೆಯುವ ಸಲುವಾಗಿ, ಸಿಪಿಸಿ 151ನೇ ಪ್ರಕರಣದ ನಿಬಂಧನೆಗಳನುಸಾರ ಅಂತರ್ನಿಹಿತ ಅಧಿಕಾರವನ್ನು ಬಳಸಲು ಮತ್ತು ತಾನು ಸಲ್ಲಿಸಿದ ಮೆಮೋ ಮೇಲೆ ಮಾಡಿದ ದಾವೆಯ ವಜಾ ಆದೇಶವನ್ನು ರದ್ದುಪಡಿಸಲು ಬಯಸಿದ್ದಾಳೆ. ಆದ್ದರಿಂದ ನಿರೂಪಿಸಲಾದಂತೆ ವಿವಾದಾಂಶ ಸಂ.(1)ಕ್ಕೆ ಹೌದು ಎಂಬ ಸಕಾರಾತ್ಮಕ ಉತ್ತರವನ್ನು ನೀಡಲಾಗಿದೆ.

3. (2012) 2 ಕೆಎಆರ್.ಎಲ್.ಜೆ.309

26. ***ವಿವಾದಾಂಶ ಸಂಖ್ಯೆ. (2): ಜೆಟ್ ಪ್ಲೈವುಡ್*** ಮೊಕದ್ದಮೆಯಿಂದ ಕಂಡು ಬರುವಂತೆ ಅದರಲ್ಲಿನ ವಾದಿಯು ಅದೇ ವ್ಯಾಜ್ಯ ಕಾರಣದ ಮೇಲೆ ಹೊಸ ದಾವೆಯನ್ನು ಹೂಡಲು ಯಾವುದೇ ಕೋರಿಕೆ ಸಲ್ಲಿಸಿರಲಿಲ್ಲ. ಅದೇ ವ್ಯಾಜ್ಯ ಕಾರಣದ ಮೇಲೆ ಹೊಸ ದಾವೆಯನ್ನು ಹೂಡಲು ಅನುಮತಿ ನೀಡದೆ ಅರ್ಜಿಯನ್ನು ವಜಾಗೊಳಿಸಲಾಗಿತ್ತು. ವಾದಿಯು ದಾವೆಯನ್ನು ಹಿಂತೆಗೆದುಕೊಂಡರೆ ಆತನಿಗೆ ಅಗತ್ಯ ಪರಿಹಾರವನ್ನು ನೀಡಲಾಗುತ್ತದೆಂದು ಭರವಸೆ ನೀಡಲಾಗಿತ್ತೆಂಬ ವಾದಿಯ ವಾದವನ್ನು ಸ್ಪಷ್ಟವಾಗಿ ನಿರಾಕರಿಸಲಾಗಿತ್ತು. ಪ್ರಸ್ತುತ ಮೊಕದ್ದಮೆಯಲ್ಲಿಯೂ ಕೂಡ, ವಾದಿಯು ಸಲ್ಲಿಸಿದ ಮೆಮೋನಲ್ಲಿ, ಆಕೆಯು ದಾವೆಯನ್ನು ಹಿಂತೆಗೆದುಕೊಂಡರೆ ಪಿಂಚಣಿ ಪ್ರಯೋಜನಗಳನ್ನು ದೊರಕಿಸಿಕೊಡುತ್ತೇವೆಂದು ಪ್ರತಿವಾದಿಗಳು ನೀಡದ್ದಾರೆನ್ನಲಾದ ಭರವಸೆ ಬಗ್ಗೆ ಯಾವುದೇ ಉಲ್ಲೇಖವನ್ನೂ ಮಾಡಿಲ್ಲ. ಪ್ರಸ್ತುತ ಮೊಕದ್ದಮೆಯಲ್ಲಿಯೂ ಕೂಡ ಅದೇ ವ್ಯಾಜ್ಯ ಕಾರಣದ ಮೇಲೆ ಅನುಮತಿಯನ್ನು ನೀಡಿಲ್ಲ. ಆದರೆ, ಅದೇನೇ ಇದ್ದರೂ, ಅಂಥ ಆದೇಶವನ್ನು ಹೊರಡಿಸುವ ಮೂಲಕ ನ್ಯಾಯಾಲಯವು ಸದರಿ ಆದೇಶವನ್ನು ಹಿಂಪಡೆಯುವ ತನ್ನ ಅಂತರ್ನಿಹಿತ ಅಧಿಕಾರವನ್ನು ಸ್ವತಃ ಕಳೆದುಕೊಂಡಿದೆ ಎಂಬುದು ಅದರರ್ಥವಲ್ಲ, ನ್ಯಾಯಾಲಯವು ಹಿಂದೆ ಹೊರಡಿಸಿದ ವಜಾ ಆದೇಶವನ್ನು ಹಿಂಪಡೆಯುವುದಕ್ಕಾಗಿ ಸಿಪಿಸಿ 151ನೇ ಪ್ರಕರಣದ ಅಡಿಯಲ್ಲಿ ನಿಹಿತವಾದ ತನ್ನ ಅಂತರ್ನಿಹಿತ ಅಧಿಕಾರವನ್ನು ಚಲಾಯಿಸುವ ಯಾವುದೇ ಅವಕಾಶವು ಅದಕ್ಕೆ ಕಂಡುಬರಲಿಲ್ಲ ಎಂಬುದನ್ನು ಸೂಚಿಸುವ ಆ ಆದೇಶದಿಂದಲೇ ಆ ಸಂಗತಿಯೂ ಕೂಡ ಸ್ಪಷ್ಟವಾಗುತ್ತದೆ.

27. ಆದೇಶವನ್ನು ಹಿಂಪಡೆಯಲು ನಿರಾಕರಿಸಿದ ಅಂಶವು ನ್ಯಾಯಾಲಯವು ತನ್ನಲ್ಲಿ ನಿಹಿತವಾದ ಅಧಿಕಾರವ್ಯಾಪ್ತಿಯನ್ನು ಚಲಾಯಿಸದಿರುವ ಒಂದು ಅಂಶವಾಗಿದೆ. ಇದು ವಾದಿಯ ಪರವಾಗಿ ಸಿಪಿಸಿ, 151ನೇ ಪ್ರಕರಣದ ಅಡಿಯಲ್ಲಿ ಅಧಿವಿಚಾರಣಾ ನ್ಯಾಯಾಲಯಕ್ಕೆ ನಿಹಿತವಾದ ಅಂಥ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸದಿರುವ ನ್ಯಾಯಾಲಯದ ಪ್ರಜ್ಞಾಪೂರ್ವಕ ತೀರ್ಪೇ ಹೊರತು, ಇದು ಅಧಿವಿಚಾರಣಾ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯ ಕೊರತೆಯ ಪ್ರಶ್ನೆಯಲ್ಲ. ***(ಮೇಲೆ ತಿಳಿಸಿದ) ಜೆಟ್ ಪ್ಲೈವುಡ್*** ಮೊಕದ್ದಮೆಯಲ್ಲಿ ನೀಡಿದ ತೀರ್ಪಿನ 23ನೇ ಪ್ಯಾರಾಗ್ರಾಫ್‌ನಲ್ಲಿ ನಿರೂಪಿಸಿದ ಸಂಗತಿಗಳು ಪ್ರಸ್ತುತ ಮೊಕದ್ದಮೆಗೆ ಸೂಕ್ತವಾಗಿ ಒಪ್ಪುವಂತಹದಾಗಿದ್ದು, ಅದನ್ನು ಈ ಕೆಳಗೆ ಉದ್ಧರಿಸಲಾಗಿದೆ:

*"23. ಅಲಿಪುರದ ಮಾನ್ಯ ಸಿವಿಲ್ ನ್ಯಾಯಾಧೀಶರ (ಹಿರಿಯ ಶ್ರೇಣಿ) 9ನೇ ನ್ಯಾಯಾಲಯದ ಆದೇಶದಿಂದ ವಾದಿಯು ತನ್ನ ದಾವೆಯನ್ನು ಹಿಂತೆಗೆದುಕೊಳ್ಳುವುದಕ್ಕೆ ಅನುಮತಿಸುವ ಅದೇ ವ್ಯಾಜ್ಯ ಕಾರಣದ ಮೇಲೆ ಹೊಸ ದಾವೆಯನ್ನು ಹೂಡುವುದಕ್ಕೆ ಯಾವುದೇ ಅನುಮತಿಯನ್ನು ನೀಡುವ ಉದ್ದೇಶ ಆ ನ್ಯಾಯಾಧೀಶರಿಗಿರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ. ಅದೇನೇ ಇದ್ದರೂ, ಅಂಥ ಆದೇಶವನ್ನು ಹೊರಡಿಸುವ ಮೂಲಕ ಮಾನ್ಯ ನ್ಯಾಯಾಧೀಶರು ಸದರಿ ಆದೇಶವನ್ನು ಹಿಂಪಡೆಯುವ ತನ್ನ ಅಂತರ್ನಿಹಿತ ಅಧಿಕಾರವನ್ನು ಸ್ವತಃ ಕಳೆದುಕೊಂಡಿದ್ದಾರೆ ಎಂಬುದು ಇದರರ್ಥವಲ್ಲ, ಹಿಂದೆ ಹೊರಡಿಸಿದ ತನ್ನ ಆದೇಶವನ್ನು ಹಿಂಪಡೆಯುವ ಅವಕಾಶವನ್ನು ನ್ಯಾಯಾಲಯವು ಕಂಡುಕೊಳ್ಳಲಿಲ್ಲ ಎಂಬುದನ್ನು ಸೂಚಿಸುವ ಆ ಆದೇಶದಿಂದಲೇ ಮೇಲ್ಕಂಡ ಸಂಗತಿಯೂ ಸ್ಪಷ್ಟವಾಗುತ್ತದೆ. 2004ರ ಸೆಪ್ಟೆಂಬರ್ 24ರ ಆದೇಶದಲ್ಲಿ ನಿರೂಪಿಸಿದ ಪರಿಸ್ಥಿತಿಗಳ ಹಿನ್ನೆಲೆಯಲ್ಲಿ ಸ್ವತಃ ವಾದಿಯ ಕೋರಿಕೆಯಿಂದಲೇ ಮಾಡಲಾದ ಆದೇಶವನ್ನು ಹಿಂಪಡೆಯುವುದಕ್ಕೆ ಯಾವುದೇ ಮೊಕದ್ದಮೆಯನ್ನು ಹೂಡಿರಲಿಲ್ಲ ಎಂಬುದು ಅಧಿವಿಚಾರಣಾ ನ್ಯಾಯಾಲಯಕ್ಕೆ ತಿಳಿಯಿತು. ಆದ್ದರಿಂದ, ಇದು ವಾದಿಯ ಪರವಾಗಿ ಅಂಥ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸದಿರುವ ನ್ಯಾಯಾಲಯದ ಪ್ರಜ್ಞಾಪೂರ್ವಕ ತೀರ್ಪೇ ಹೊರತು, ಇದು ಅಧಿಕಾರ ವ್ಯಾಪ್ತಿ ಕೊರತೆಯ ಪ್ರಶ್ನೆಯಲ್ಲ."*

ಸರ್ವೋಚ್ಚ ನ್ಯಾಯಾಲಯವು ಆ ಮೊಕದ್ದಮೆಯನ್ನು ವ್ಯವಹರಿಸುವಾಗ ವರದಿಯಾದ ***ಮನೋಹರ್‌ಲಾಲ್ ಚೋಪ್ರಾ -ವಿರುದ್ಧ- ರಾಜ್ ಬಹದ್ದೂರ್ ರಾವ್ ರಾಜಾ ಸೇಠ್ ಹೀರಾಲಾಲ್*** [4], ಮೊಕದ್ದಮೆಯಲ್ಲಿ ಈ ಮೊದಲು ನೀಡಿದ ತನ್ನ ತೀರ್ಪನ್ನೇ ಅಧಾರವಾಗಿಟ್ಟುಕೊಂಡಿದೆ. ಅದರಲ್ಲಿ ಈ ಕೆಳಕಂಡಂತೆ ನಿರ್ಣಯಿಸಲಾಗಿದೆ:

4. ಎಐಆರ್ 1962 ಎಸ್‌ಸಿ 527

*'ಭವಿಷ್ಯದ ವ್ಯಾಜ್ಯಗಳಲ್ಲಿ ಉದ್ಭವಿಸಬಹುದಾದ ಎಲ್ಲಾ ಸಾಧ್ಯತಾ ಪರಿಸ್ಥಿತಿಗಳನ್ನು ನಿರೂಪಿಸುವುದಕ್ಕೆ ಶಾಸಕಾಂಗವು ಅಸಮರ್ಥವಾಗಿದೆ ಎಂಬ ಸರಳ ಕಾರಣಕ್ಕಾಗಿ ಮತ್ತು ದಾವೆಗಳಿಗೆ ಸಂಬಂಧಿಸಿದಂತೆ ಕಾರ್ಯ ವಿಧಾನಗಳನ್ನು ಉಪಬಂಧಿಸುವುದಕ್ಕಾಗಿ ಸಂಹಿತೆಯ ಉಪಬಂಧಗಳು ಬಳಕೆಯಾಗದೆ ಉಳಿಯುವಂತಿಲ್ಲ ಎಂಬ ಅಂಶವು ಈಗಾಗಲೇ ಸುಸ್ಥಾಪಿತವಾಗಿದೆ'.*

28. ***ರಾಮೇಶ್ವರ್ ಸರ್ಕಾರ್*** ಮೊಕದ್ದಮೆಯಲ್ಲಿ ನಿರ್ಣಯಿಸಿರುವುದೇನೆಂದರೆ, ವಾದಿಯು ತಪ್ಪು ಗ್ರಹಿಕೆಯಿಂದ ದಾವೆಯೊಂದನ್ನು ಹಿಂಪಡೆದಾಗ ದಾವೆಯನ್ನು ಹಿಂಪಡೆಯಲು ಅನುಮತಿಸಿದ ಆದೇಶವನ್ನು ರದ್ದುಪಡಿಸುವುದಕ್ಕೆ ನ್ಯಾಯಾಲಯಕ್ಕೆ ಅಧಿಕಾರವಿರುವುದಿಲ್ಲ ಎಂಬುದಾಗಿದೆ. ಪ್ರಸ್ತುತ ಮೊಕದ್ದಮೆಯಲ್ಲಿ, ಕೃಷ್ಣಾಚಾರಿಯು ತ್ಯಜಿಸುವ ಕಾರಣದ ಮೇಲೆ ತನ್ನ ಪತ್ನಿಯಿಂದ ಎಂದರೆ ವಾದಿಯಿಂದ ವಿಚ್ಛೇದನವನ್ನು ಕೋರಿ ಹಿಂದೂ ವಿವಾಹ ಅಧಿನಿಯಮದ 13(1)(ಬಿ) ಪ್ರಕರಣದ ಅಡಿಯಲ್ಲಿ ಒಂದು ಅರ್ಜಿಯನ್ನು ಸಲ್ಲಿಸಿದ್ದು, ಆ ಅರ್ಜಿಯು ವಾದ ಪ್ರತಿವಾದಗಳ ನಂತರ ವಜಾಗೊಂಡಿತು ಎಂಬುದನ್ನು ತೋರಿಸುವುದಕ್ಕೆ ಸಾಕ್ಷ್ಯಾಧಾರಗಳು ದಾಖಲಾಗಿವೆ. ಮಾಸಿಕ ರೂ.1,000/- ದರದಲ್ಲಿ ಜೀವನಾಂಶ ಪಡೆಯುವುದಕ್ಕಾಗಿ ಆಕೆಯ ಪರವಾಗಿ ಮಂಜೂರು ಮಾಡಿದ ಡಿಕ್ರಿಯನ್ನು ಆಕೆ ಜಾರಿಗೊಳಿಸಿದ್ದಳು. ಆಕೆಯ ಕಡೆಯಿಂದಲೇ ಸಲ್ಲಿಸಿದ ಮೆಮೋ ಪರಿಣಾಮವಾಗಿ ಆಕೆಯ ದಾವೆಯು ವಜಾಗೊಂಡ ಕೂಡಲೇ 2ನೇ ಪ್ರತಿವಾದಿ ಶ್ರೀಮತಿ ನಾಗರತ್ನಮ್ಮ ತಾನು ಕೃಷ್ಣಾಚಾರಿಯ ನಾಮ ನಿರ್ದೇಶಿತಳೆಂದು ಕ್ಲೇಮು ಮಾಡಿದ ಆಧಾರದ ಮೇಲೆ ಆಕೆಗೆ ಎಲ್ಲಾ ಪಿಂಚಣಿ ಪ್ರಯೋಜನಗಳನ್ನು ನೀಡಲಾಯಿತು. ಪತಿ ಮತ್ತು ಪತ್ನಿಯ ಸಂಬಂಧವು ಸಂಪೂರ್ಣವಾಗಿ ರುಜುವಾತಾದ ಹೊರತು ಆಕೆಯ ನಾಮ ನಿರ್ದೇಶನವು ಮೃತನ ಪತ್ನಿಯ ಸ್ಥಾನಮಾನವನ್ನು ಪ್ರದತ್ತಗೊಳಿಸುವುದಿಲ್ಲ.

29. ಪ್ರಸ್ತುತ ಮೊಕದ್ದಮೆಯಲ್ಲಿ, ಮೃತ ಕೃಷ್ಣಾಚಾರಿಯು ಆಕೆಯನ್ನು ತನ್ನ ಪತ್ನಿಯೆಂದೇ ಪರಿಗಣಿಸಿದ್ದ ಮತ್ತು ಪರಿತ್ಯಜಿಸಿದ ಆಧಾರದ ಮೇಲೆ ವಿಚ್ಛೇದನಕ್ಕಾಗಿ ಮೊಕದ್ದಮೆಯನ್ನು ದಾಖಲಿಸಿದ್ದ ಮತ್ತು ಸಕ್ಷಮ ಸಿವಿಲ್ ನ್ಯಾಯಾಲಯದಿಂದ

ಜೀವನಾಂಶ ನೀಡಲು ಆತನಿಗೆ ಡಿಕ್ರಿ ಕೂಡ ಆಗಿತ್ತು ಎಂಬುದನ್ನು ತೋರಿಸುವುದಕ್ಕೆ, ವಾದಿಯು ಮೇಲ್ನೋಟಕ್ಕೆ ಕಂಡು ಬರುವ ಸಾಕ್ಷ್ಯಾಧಾರಗಳನ್ನು ಸಲ್ಲಿಸಿದ್ದಳು ಎಂದು ಹೇಳಿದರೆ ಅಷ್ಟೇ ಸಾಕಾಗುತ್ತದೆ. ಜೀವನಾಂಶಕ್ಕಾಗಿ ಮಂಜೂರು ಮಾಡಿದ ಡಿಕ್ರಿಯನ್ನು ಆಕೆಯು ನಿರ್ವಹಣೆಯನ್ನು ಕೂಡ ಮಾಡಿದ್ದಳು ಮತ್ತು ಆಕೆಗೆ ಆಕೆಯ ಪತಿಯಿಂದ ಜಾರಿ ನ್ಯಾಯಾಲಯದಲ್ಲಿ ಸ್ವಲ್ಪ ಹಣವೂ ಸಂದಾಯವಾಗಿತ್ತು. ಅದರ ಜೊತೆಗೆ, ಆಕೆಯು ರದ್ದುಪಡಿಸಿದ ಆದೇಶವನ್ನು ಹಿಂಪಡೆಯುವುದಕ್ಕಾಗಿ ಯಾಕೆ ಅರ್ಜಿ ಸಲ್ಲಿಸಬೇಕಾಯಿತು ಎಂಬ ಬಗ್ಗೆ ಪ್ರಾತ್ಯಕ್ಷಿಕೆಯನ್ನು ನೀಡಲು ಅರ್ಜಿದಾರಳು–ವಾದಿಯು ಸಾಕ್ಷಿ ಹೇಳುವ ಕಟಕಟೆಗೆ ಬಂದಿದ್ದಳು.

30. ದಾವೆಯನ್ನು ವಜಾಗೊಳಿಸಿಕೊಳ್ಳುವುದಕ್ಕೆ ಇದ್ದ ಕಾರಣಗಳ ಬಗ್ಗೆ ಮೆಮೋ ಯಾವುದೇ ಉಲ್ಲೇಖವನ್ನೂ ಮಾಡಿಲ್ಲ ಎಂಬುದು ನಿಜ. ಮೊಕದ್ದಮೆಯ ವಿಶಿಷ್ಟ ಸಂಗತಿಗಳನ್ನು ಪರಿಗಣನೆಗೆ ತೆಗೆದುಕೊಂಡರೆ, ಅಧಿವಿಚಾರಣಾ ನ್ಯಾಯಾಲಯವು ಸಿಪಿಸಿ 151ನೇ ಪ್ರಕರಣದ ನಿಬಂಧನೆಗಳನುಸಾರ ತನಗೆ ನಿಹಿತವಾಗಿರುವ ಅಧಿಕಾರ ವ್ಯಾಪ್ತಿಯನ್ನು ಚಲಾಯಿಸಲು ನಿರಾಕರಿಸಿದೆ ಎಂದು ಹೇಳಬಹುದಾಗಿದೆ. ಅದನ್ನು, ಕೋರಿಕೆಯನ್ನು ತಿರಸ್ಕರಿಸುವ **'ಪ್ರಜ್ಞಾಪೂರ್ವಕ ನಿರ್ಣಯ'** ಗಳಲ್ಲೊಂದೆಂದು ಪರಿಗಣಿಸಲಾಗದು. ***ರಾಮೇಶ್ವರ್ ಸರ್ಕಾರ್*** ಮೊಕದ್ದಮೆಯಲ್ಲಿ, ನ್ಯಾಯಾಲಯಕ್ಕೆ ಸಿಪಿಸಿ, 151ನೇ ಪ್ರಕರಣದ ನಿಬಂಧನೆಗಳನುಸಾರ ನಿಹಿತವಾದ ಅಂತರ್ನಿಹಿತ ಅಧಿಕಾರಗಳನ್ನು ಚಲಾಯಿಸಿ ದಾವೆಯನ್ನು ಹಿಂಪಡೆಯುವುದಕ್ಕೆ ಸಲ್ಲಿಸಿದ ಅರ್ಜಿಯನ್ನು ಹಿಂಪಡೆಯಲು ಅನುಮತಿ ನೀಡುವ ಅಧಿಕಾರ ವ್ಯಾಪ್ತಿಯಿದೆ ಮತ್ತು ಅದಕ್ಕೆ ಸಮರ್ಥನೀಯ ಕಾರಣಗಳಿರಬೇಕು ಎಂದು ನಿರ್ಣಯಿಸಲಾಗಿದೆ.

31. ಅಂತರ್ನಿಹಿತ ಅಧಿಕಾರವು ನ್ಯಾಯಾಲಯಕ್ಕೆ ಪ್ರದತ್ತವಾಗಿರುವಂತಹದ್ದಲ್ಲ; ಅದು ನ್ಯಾಯಾಲಯದ ಮುಂದಿರುವ ಪಕ್ಷಕಾರರಿಗೆ ನ್ಯಾಯವನ್ನು ನೀಡುವ ಅದರ ಕರ್ತವ್ಯದ ಬಲದಿಂದ ಆ ನ್ಯಾಯಾಲಯದಲ್ಲಿ ಅಂತರ್ನಿಹಿತಗೊಂಡಂತಹ ಅಧಿಕಾರವಾಗಿದೆ ಎಂದು (ಮೇಲೆ ತಿಳಿಸಿದ) ***ಮಹೋಹರ್‌ಲಾಲ್ ಚೋಪ್ರಾ*** ಮೊಕದ್ದಮೆಯಲ್ಲಿ ನಿರ್ಣಯಿಸಲಾಗಿದೆ.

32. 'ಕಾರ್ಯ ವಿಧಾನವು ನ್ಯಾಯಕ್ಕೆ ಅಡಿಯಾಳಾಗಿರುತ್ತದೆ ಮತ್ತು ಕಾರ್ಯ ಪ್ರಕ್ರಿಯಾ ಕಾನೂನು ಅದಕ್ಕೆ ಯಾವಾಗಲೂ ಸಾಧಕವಾಗಿರುತ್ತದೆ ಹಾಗೂ ನ್ಯಾಯಕ್ಕೆ ಸಹಾಯಕವಾಗಿರುತ್ತದೆ. ನ್ಯಾಯಗ್ರಾಹಿಯನ್ನು ದಾರಿತಪ್ಪಿಸುವ ಅಥವಾ ನಿರಾಶೆಗೊಳಿಸುವ ಯಾವುದೇ ವ್ಯಾಖ್ಯಾನವು ಪರಿಪಾಲಿಸುವಂತಹದ್ದಾಗಿರುವುದಿಲ್ಲ. ಕಾರ್ಯ ಪ್ರಕ್ರಿಯಾ ಕಾನೂನು ಸೇವಕನೇ ಹೊರತು ಪೀಡಕನಲ್ಲ, ಅದು ನ್ಯಾಯಕ್ಕೆ ಸಹಾಯಕವೇ ಹೊರತು ಅಡ್ಡಿಯಲ್ಲ. ಕಾರ್ಯ ಪ್ರಕ್ರಿಯಾ ನಿಯಮನಗಳು ಮನೆಗೆಲಸದವಳೇ ಹೊರತು ಪತ್ನಿಯಲ್ಲ. ಅದು ನ್ಯಾಯನಿರ್ವಹಣೆಗೆ ಅನುಕೂಲಕರವೇ ಹೊರತು ನಿರ್ಬಂಧಕವಲ್ಲ.' – ಈ ಅಭಿಪ್ರಾಯವನ್ನು ***ಅರ್.ಎನ್. ಜಡಿ ಅಂಡ್ ಬ್ರದರ್ಸ್ ಮತ್ತು ಇತರರು –ವಿರುದ್ಧ– ಸುಭಾಶ್‌ಚಂದ್ರ*** [5], ಮೊಕದ್ದಮೆಯಲ್ಲಿ ಮಾನ್ಯ ಸರ್ವೋಚ್ಚ ನ್ಯಾಯಾಲಯವು ವ್ಯಕ್ತಪಡಿಸಿದೆ. ಆ ನಿರ್ಣಯದ 15ನೇ ಪ್ಯಾರಾಗ್ರಾಫ್‌ನಲ್ಲಿರುವ ಮತ್ತೊಂದು ಅಭಿಪ್ರಾಯವು ಇಲ್ಲಿಗೆ ಸುಸಂಗತವಾದುದಾಗಿದ್ದು, ಅದನ್ನು ಈ ಕೆಳಗೆ ಉದ್ಧರಿಸಲಾಗಿದೆ:

> *'ಆದ್ದರಿಂದ ಅರ್ಥ ವ್ಯಾಖ್ಯಾನದ ಸೂಕ್ತ ಸ್ಥಿತಿಸ್ಥಾಪಕತೆಗೆ ಅವಕಾಶ ನೀಡದಿರುವ ಪ್ರಕರಣಗಳ ತಾಂತ್ರಿಕ ಅರ್ಥವಿವರಣೆಯನ್ನು ಕೂಡ, ನ್ಯಾಯದ ಮುನ್ನಡೆಗೆ ವಿನ್ಯಾಸಗೊಳಿಸಲಾದ ಅರ್ಥಗಳೇ ಅದನ್ನು ವ್ಯರ್ಥಗೊಳಿಸಲು ಬಳಸದ ಹಾಗೆ ರಕ್ಷಿಸಬೇಕು.'*

ಈ ಹಿನ್ನೆಲೆಯಲ್ಲಿ ವಿವಾದಾಂಶ ಸಂಖ್ಯೆ (2)ಕ್ಕೂ ಕೂಡ 'ಹೌದು' ಎಂದು ಸಕಾರಾತ್ಮಕವಾಗಿ ಉತ್ತರಿಸಲಾಗಿದೆ ಮತ್ತು ಅರ್ಜಿಯನ್ನು ಪುರಸ್ಕರಿಸಲಾಗುತ್ತದೆ.

33. ಅದರಂತೆ, ಮೇಲೆ ತಿಳಿಸಿದ ಕಾರಣಗಳಿಗಾಗಿ, ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

---

5. ಎಐಆರ್ 2007 ಎಸ್‌ಸಿ 2571

## ಆದೇಶ

ಅರ್ಜಿಯನ್ನು ಪುರಸ್ಕರಿಸಲಾಗಿದೆ. ಓ.ಎಸ್.6870/09 ದಾವೆಯಲ್ಲಿ ಹೊರಡಿಸಿದ ದಿನಾಂಕ 22.7.2013ರ ಪ್ರಶ್ನಿತ ಆದೇಶವನ್ನು ಸಿಪಿಸಿ 151ನೇ ಪ್ರಕರಣದ ಅಡಿಯಲ್ಲಿ ಸಿವಿಲ್ ನ್ಯಾಯಾಲಯಕ್ಕೆ ನಿಹಿತವಾದ ಅಂತರ್ನಿಹಿತ ಅಧಿಕಾರವನ್ನು ಬಳಸುವ ಮೂಲಕ ರದ್ದುಪಡಿಸಲಾಗಿದೆ. ಸದರಿ ದಾವೆಯು ವಜಾಗೊಂಡ ದಿನಾಂಕದಂದು ಇದ್ದಂತೆ ಅದರ ಮೂಲ ಸ್ಥಿತಿಗೆ ಪುನರ್ ಸ್ಥಾಪನೆಗೊಳ್ಳುತ್ತದೆ.

ದಾವೆಯು ಪುನರ್ ಸ್ಥಾಪನೆಗೊಂಡ ಹಿನ್ನೆಲೆಯಲ್ಲಿ, ಪಕ್ಷಕಾರರು **2015ರ ಜುಲೈ 31ರಂದು** ಅಧಿವಿಚಾರಣಾ ನ್ಯಾಯಾಲಯದ ಮುಂದೆ ತಪ್ಪದೆ ಹಾಜರಾಗತಕ್ಕದ್ದು ಮತ್ತು ಮಾನ್ಯ ನ್ಯಾಯಾಧೀಶರು ಸಾಧ್ಯವಾದಷ್ಟು ಬೇಗನೆ 31ನೇ ಜುಲೈ 2015ರಿಂದ **ಆರು ತಿಂಗಳುಗಳೊಳಗೆ** ದಾವೆಯನ್ನು ವಿಲೆ ಮಾಡಲು ಆದ್ಯತೆ ನೀಡಬೇಕು. ದಾವೆಯು ಸಾಧ್ಯವಾದಷ್ಟು ತ್ವರಿತವಾಗಿ ವಿಲೆಯಾಗುವುದಕ್ಕೆ ಪಕ್ಷಕಾರರು ಮತ್ತು ಮಾನ್ಯ ನ್ಯಾಯವಾದಿಗಳು ಅಧಿವಿಚಾರಣಾ ನ್ಯಾಯಾಲಯದೊಂದಿಗೆ ಸಹಕರಿಸತಕ್ಕದ್ದು.

ಪಕ್ಷಕಾರರು ಸ್ವತಃ ಖರ್ಚುಗಳನ್ನು ಭರಿಸಿಕೊಳ್ಳತಕ್ಕದ್ದು.